ಸಹಿ ಮಾಡಿಸುತ್ತಾನೆ. ನಿಜವಾಗಿಯೂ ಫೀಲ್ಡ್ ಗೆ ಹೋದನೋ ಇಲ್ಲವೋ ಎನ್ನುವುದನ್ನು ನಿಮ್ಮ ಅಧಿಕಾರಿಗಳಿಗೆ ಗೊತ್ತಾಗುವುದಿಲ್ಲ, ಯಾರೆ ಆದರೂ ಅಷ್ಟು ಸಮರ್ಪಕವಾಗಿ ಆಗುವುದಿಲ್ಲ. ಈಗ ಗೊಂದಲದಲ್ಲಿದ್ದೀರಿ, ಬಿಡುವಿಲ್ಲ, ನಮ್ಮ ಅಧಿಕಾರಿಗಳು ಬೆಂಗಳೂರು ಬಿಟ್ಟು ಹೊರಕ್ಕೆ ಹೋಗುವುದಿಲ್ಲ, ಜಿಲ್ಲಾ ಮಟ್ಟದ ಅಧಿಕಾರಿಗಳು ಹೋಗುತ್ತಾರಾ ಎಂದರೆ ಅವರು ಹೋಗುವುದಿಲ್ಲ. ಯಾರೇ ಅಧಿಕಾರ ನಡೆಸಿದರೂ ಕೂಡ ಒಂದುಸರ್ಕಾರಿ ವ್ಯವಸ್ಥೆ ಆ ಇಲಾಖೆಯವರು ಈ ರೀತಿ ತೊಂದರೆಗೆ ಒಳಗಾಗಿರುವ ಈ ಕ್ಷೇತ್ರದ ಕಡೆಗೆ ಗಮನ ಕೊಡದೆ ಇದ್ದರೆ, ಪ್ರವಾಸ ಮಾಡದೆ ಇದ್ದರೆ ಸರ್‌ಪ್ರೈಸ್ ವಿಸಿಟ್ ಮಾಡದೆ ಇದ್ದರೆ ಯಾವ ಅಧಿಕಾರಿಗಳ ಮೇಲೆ ಯಾರು ರೈತ ಸಂಪರ್ಕ ಕೇಂದ್ರಗಳನ್ನು ಆಕ್ಟಿವ್ ಮಾಡಿ, ಆ ಅಧಿಕಾರಿಗಳು ಫೀಲ್ಡ್‌ಗೆ ಹೋಗುವಂತೆ ಮಾಡಿ, ನಿಮ್ಮ ಜಿಲ್ಲಾ ಮಟ್ಟದ ಅಧಿಕಾರಿಗಳು ಸರ್‌ಪ್ರೈಸ್ ವಿಸಿಟ್ ಮಾಡಿ ಯಾವುದೇ ಮುಲಾಜಿಲ್ಲದೆ, ಅಲ್ಲಿ ಹೋಗಿ ಕೋಳಿ ಕುಯಿಸಿಕೊಂಡು ರಾತ್ರಿ ಊಟ ಮಾಡುವುದಕ್ಕಲ್ಲ ಹೋಗುವಂತಹದ್ದು, ಆದರೆ ಪ್ರಾಮಾಣಿಕವಾದಂತಹ ಸಲಹೆಯನ್ನು, ಕ್ರಮಗಳನ್ನು ಅಧಿಕಾರಿಗಳು ತೆಗೆದುಕೊಳ್ಳಬೇಕಲ್ಲ? ಅದು ಆಗಬೇಕಲ್ಲ? ಅದು ಆಗುವುದಕ್ಕೆ ನೀವೇನು ಮಾಡಿದ್ದೀರಾ? ಈಗ ನಾವು ಹೇಳಿದ್ದು ನಿಜವಾದರೆ, ಏನು ಕ್ರಮ ತೆಗೆದುಕೊಳ್ಳಬೇಕು, ವಿರೋಧಪಕ್ಷ ದವರಾದ ನಾವೇನು ಸಹಕಾರವನ್ನು ಕೊಡಬೇಕು ಹೇಳಿ ನಾವು ಕೊಡುವುದಕ್ಕೆ ಸಿದ್ದರಿದ್ದೇವೆ.

ಅಧ್ಯಕ್ಷರು: ದಿನಾಂಕ:30.06.2005 ರಿಂದ ಪ್ರಾರಂಭವಾಗಿರುವ ಪ್ರಸಕ್ತ ಅಧಿವೇಶನದಲ್ಲಿ ಅನಾರೋಗ್ಯ ಕಾರಣದಿಂದ ಗೈರು ಹಾಜರಾಗಲು ಅನುಮತಿ ನೀಡುವಂತೆ ಮಾನ್ಯ ಸದಸ್ಯರಾದ ಶ್ರೀ.ಯು.ಟಿ.ಫರೀದ್‌ರವರು ಕೋರಿರುತ್ತಾರೆ. ಮಾನ್ಯ ಸದಸ್ಯರು ಗೈರು ಹಾಜರಾಗಲು ಸದನದ ಸಮಿತಿ ಇದೆ ಎಂದು ಭಾವಿಸುತ್ತೇನೆ.

ಗೈರು ಹಾಜರಾಗಲು ಶ್ರೀ ಯು.ಕೆ. ಫರೀದ್‌ರವರಿಗೆ ಅನುಮತಿ ನೀಡಲಾಗಿದೆ. ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 42 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿ:05.07.2005ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)